118

2. ಸದರೀ ತಾಲ್ಲೂಕಿನ ಅಮಲ್ದಾರ್ರು ಪ್ರತ್ಯೇಕ ಪ್ರತ್ಯೇಕ ನೋಟಿಸ್‌ಗಳು ಬಂದ ಮೇಲೆ ಅವುಗಳನ್ನ ತೆಗದುಕೊಳ್ಳುವ ಬಗ್ಯೆ ಸದರೀ ಇನಾಂದಾರ್ರು ಏರ್ಜ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕಿನ ಅಮಲ್ದಾರ್ರು ಅಂಥಾ ನೋಟಿಸ್‌ಗಳನ್ನ ದೇರ್‌ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.

3. ಸದರೀ ಜಿಲ್ಲರೆ ಇನಾಂಗಳ ಬಗ್ಯೆ ಈ ಆಫೀಸಿನಿಂದ ಮೊದಲೇ ಕೊಡಲ್ಪಟ್ಟ ಹಂಗಾಮಿಪಟ್ಟೆಗಳು ರದ್ದುಮಾಡಲ್ಪಟ್ಟು ಇರುತ್ತೆಂದು ಇದರ ದೆಸೆಯಿಂದ ಪ್ರಕಟಿಸಲ್ಪಟ್ಟು ಯಿರುತ್ತೆ.

ಜೆ. ಪಿ. ಗ್ರಾಂಟ್,
ಸೂಪರಿಂಟೆಂಡೆಂಟ್ ಆಫ್ ಇನಾಂ ಸೆಟ್ಲ ಮೆಂಟ್ಸ್.

ಬೆಂಗಳೂರ್ ಸಿಟಿ ಮ್ಯುನಿಸಿಪಲ್ ಬೋರ್ಡಿನಿಂದ.

ಇ ಸ್ತಿ ಹಾ ರ್ ನಾ ಮೆ .

ತಾರೀಖು 15ನೇ ಆಗಸ್ಟ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ನಾರ್ದರ್ನ ಯಕ್ಸ್‌ಟೆರ್ಷನ್‌ನಲ್ಲಿ ಮನೆ ನಿವೇಶನಗಳ ಪೈಕಿ ಖಾಲಿ ಇರುವ ಈ ಕೆಳಗೆ ನಮೂದಿಸಿ ಇರುವ ನಂಬರುಗಳುಳ್ಳ 8 ನಿವೇಶನಗಳನ್ನ ಈ ಮಾಹೆ 28ನೇ ತಾರೀಖು ಪ್ರಾತಃಕಾಲ 7½ ಘಂಟೆಗೆ ಡಿಟೋ ಜಾಗಾದ ಬಳಿಯಲ್ಲೇ ಹರಾಜ್ ಮಾಡಿಸಲ್ಪಡುತ್ತೆಯಾಗಿ ಇಷ್ಟವುಳ್ಳವರು ಹಾಜರಿದ್ದು ಸವಾಲ್‌ಮಾಡಿ ಪಡದುಕೊಳ್ಳ ಬಹುದು.

2. ಸವಾಲ್ ಖೈದಾದ ಕೂಡ್ಲೆ ಛಡಸವಾಲ್‌ದಾರ್ರು ಸವಾಲ್ ಮೊಬಲಗಿನ ನಾಲ್ಕರಲ್ಲಿ ಬಂದು ಹಿಸ್ಸೆಯನ್ನ ಕೂಡ್ಲೆ ಡಿಪಾಜಿಟ್ಟು ಗಿ ಹಾಜರ್ಮಾಡಿ ಮಂಜೂರಿ ಆರಡರ್ ಕೊಟ್ಟ 7 ದಿವಸದೊಳಗಾಗಿ ಬಾಕಿ ಮೊಬಲಗು ಪೂರಾ ಪಾವತಿ ಮಾಡಿ ರಕೀತಿ ಪಡದು ಜಮ್ಮಾ ಸುಫರ್ದು ಮಾಡಿಕೊಳ್ಳಬೇಕು.

3. ಹಾಗೆ ಸುಫರ್ದು ಮಾಡಿಕೊಂಡ 2 ತಿಂಗಳೊಳಗಾಗಿ ಅವಶ್ಯಕವಾದ ಸಾಮಾನುಗಳನ್ನ ವದಗಿಸಿಕೊಂಡು ಪ್ಯಾಕ್ ಹಾಜರ್ಮಾಡಿ ಲೈಸೆನ್ಸ್ ಪಡದು 12 ತಿಂಗಳೊಳಗಾಗಿ ಕಟ್ಟಡವನ್ನ ಪೂರೈಸಿಕೊಳ್ಳಬೇಕು. ಇದಕ್ಕೆ ತಪ್ಪಿದಲ್ಲಿ ಲುಕ್ಸಾನಿಗೆ ಯಾವ ಈಡು ಇಲ್ಲದೆ ಸೈಟ್ ಸರ್ಕಾರಕ್ಕೆ ಕೇರಿಸಿಕ್ಕೊಂಡು ಹರಾಜ್ ಮಾಡಿಸಲ್ಪಡುತ್ತೆ.

4. ಸವಾಲ್ ಖೈದಾದ ಕೂಡ್ಲೆ ಡಿಪಾಜಿಟ್ ಹಾಜರ್ಮಾಡದೆಯಾಗಲೀ ಅಥವಾ ಮಂಜೂರಿ ಆರ್ಡರ್ ಪಡದ 7 ದಿವಸದೊಳಗಾಗಿ ಪೂರಾ ಮೊಬಲಗು ಪಾವತಿ ಮಾಡದೆಯಾಗಲೀ ತಪ್ಪಿದಲ್ಲಿ ಲುಕ್ಸಾನಿಗೆ ಛಡಸವಾಲ್‌ದಾರನ ಜವಾಬ್‌ದಾರಿ ಮೇಲೆ ಸೈಟ್ ಪುನಹಾ ಹರಾಜ್ ಮಾಡಿಸಲ್ಪಡುತ್ತೆ. ಈ ಹರಾಜಿನಲ್ಲಿ ನಫೆಬಂದರೆ ಬೋರ್ಡಿಗೆ ಸೇರಿದ್ದಾಗಿರುತ್ತೆ.

5. ಯಾವ ಕಾರಣವನ್ನು ತಿಳಿಸದೆ ಯಾವ ಸವಾಲನ್ನಾಗಲೀ ಅಂಗೀಕರಿಸುವ ಮತ್ತು ನಿರಾಕರಿಸುವ ಬಾಧ್ಯತೆಯನ್ನು ಈ ಕೆಳಗೆ ಸೈನ್ ಮಾಡಿ ಇರುವರು ವುಳಿಸಿಕೊಂಡು ಇರುತ್ತಾರೆ.

ಸೈಟ್ ನಂಬರ್.		ಸೈಟ್ ನಂಬರ್.
30	..	59
43	..	99
57	..	102
58	..	103

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸಿಟಿ ಮಜಕೂರು 1ನೇ ವ್ಯಾಲೇಸ್ ಡಿವಿಜನ್‌ಗೆ ಸೇರಿದ ಹೊಸ ಗುಟ್ಟ ಹಳ್ಳಿ ಬಳಿಯಲ್ಲಿ ಮನೆಗಳಿಗಾಗಿ ವಿಂಗಡಿಸಿರುವ ನಿವೇಶನಗಳ ಪೈಕಿ ಈ ಕೆಳಗೆ ನಮೂದಿಸುವ 30 ನಿವೇಶನಗಳನ್ನ ಆವುಗಳ ಮಾರ್ಜ್ಜನ್ನಲ್ಲಿ ನಮೂದಾದ ತಾರೀಖುಗಳಲ್ಲಿ ಪ್ರಾತಃಕಾಲ 7½ ಘಂಟೆಯಿಂದ ಡಿಟೋ ಜಾಗಾದಬಳಿಯಲ್ಲೇ ಹರಾಜು ಮಾಡಿಸಲ್ಪಡುತ್ತೆಯಾಗಿ ಇಷ್ಟವುಳ್ಳವರು ಹಾಜರಿದ್ದು ಸವಾಲ್‌ಮಾಡಿ ಪಡದುಕೊಳ್ಳಬಹುದು.

2. ಛಡಸವಾಲ್‌ದಾರ್ರು ಸವಾಲ್ ಖೈದಾದ ಕೂಡ್ಲೆ ಸವಾಲ್ ಮೊಬಲಗಿನ ನಾಲ್ಕರಲ್ಲಿ ಬಂದು ಹಿಸ್ಸೆ ಮೊಬಲಗನ್ನ ಹಾಜರ್ಮಾಡಿ ಮಂಜೂರಿ ಆರ್ಡರ್ ಕೊಟ್ಟ ಏಳು ದಿವಸದೊಳಗಾಗಿ ಬಾಕಿ ಮೊಬಲಗು ಪೂರಾ ಪಾವತಿಮಾಡಿ ರಸೀತಿ ಪಡದು ಜಮ್ಮಾ ಸುಫರ್ದು ಮಾಡಿಕೊಳ್ಳಬೇಕು.

3. ಹಾಗೆ ಸುಫರ್ದು ಮಾಡಿಕೊಂಡ ತಾರೀಖು ಲಾಗಾಯತು ಎರಡು ತಿಂಗಳವಳಗಾಗಿ ಅವಶ್ಯಕವಾದ ಸಾಮಾನುಗಳನ್ನ ವದಗಿಸಿ ಕೊಂಡು, ಪ್ಯಾಕ್ ಹಾಜರುಮಾಡಿ ಲೈಸೆನ್ಸ್ ಪಡದು ಹನ್ನೆರಡು ತಿಂಗಳೊಳಗಾಗಿ ಕಟ್ಟಡವನ್ನ ಪೂರೈಸಿಕೊಳ್ಳಬೇಕು. ತಪ್ಪಿದಲ್ಲಿ ಲುಕ್ಸಾನಿಗೆ ಯಾವ ಈಡು ಯಿಲ್ಲದೆ ನಿವೇಶನವನ್ನ ಸರ್ಕಾರಕ್ಕೆ ಸೇರಿಸಿಕೊಂಡು ಹರಾಜು ಮಾಡಿಸಲ್ಪಡುವದು.

4. ಸವಾಲ್ ಖೈದಾದ ಕೂಡ್ಲೆ ಡಿಪಾಜಿಟ್ ಹಾಜರ್ಮಾಡದೆಯಾಗಲಿ ಅಥವಾ ಮಂಜೂರಿ ಆರ್ಡರ್ ಪಡದ ಏಳು ದಿವಸದೊಳಗಾಗಿ ಬಾಕಿ ಮೊಬಲಗು ಪಾವತಿ ಮಾಡದೆಯಾಗಲಿ ತಪ್ಪಿದಲ್ಲಿ ಲುಕ್ಸಾನಿಗೆ ಛಡಸವಾಲ್‌ದಾರನ ಜವಾಬ್‌ದಾರೀ ಮೇಲೆ ಸೈಟ್ ಪುನಹ ಹರಾಜು ಮಾಡಿಸಲ್ಪಡುವದು. ಈ ಹರಾಜಿನಲ್ಲಿ ನಫೆ ಬಂದರೆ ಬೋರ್ಡಿಗೆ ಸೇರಿದ್ದಾಗಿರುತ್ತೆ.

5. ಯಾವ ಕಾರಣವನ್ನೂ ತಿಳಿಸದೆ ಯಾವ ಸವಾಲನ್ನಾಗಲಿ ಅಂಗೀಕರಿಸುವ ಮತ್ತು ನಿರಾಕರಿಸುವ ಬಾಧ್ಯತೆಯನ್ನು ಈ ಕೆಳಗೆ ಸೈನ್ ಮಾಡಿರುವರು ವುಳಿಕೊಂಡಿರುತ್ತಾರೆ:—

ಸೈಟ್ ನಂಬರು.	ಹರಾಜು ತಾರೀಖು.	ಸೈಟ್ ನಂಬರು.	ಹರಾಜು ತಾರೀಖು.	ಸೈಟ್ ನಂಬರು.	ಹರಾಜು ತಾರೀಖು.
15	1896ನೇ ಇಸವಿ ಸೆಪ್ಟೆಂಬರು ತಾರೀಖು 14ನೇ ಪ್ರಾತಃಕಾಲ 7½ ಘಂಟೆ ಲಾಗಾಯತು.	25	ಡಿಟೋ ಮಾಹೆ 16ನೇ ತಾರೀಖು ಪ್ರಾತಃಕಾಲ 7½ ಘಂಟೆ ಲಾಗಾಯತು.	35	ಡಿಟೋ ಮಾಹೆ 18ನೇ ತಾರೀಖು ಪ್ರಾತಃಕಾಲ 7½ ಘಂಟೆ ಲಾಗಾಯತು.
16		26		36	
17		27		37	
18		28		38	
19		29		39	
20		30		40	
21		31		41	
22		32		42	
23		33		43	
24		34		44	

ಟಿ. ಟಿ. ಲೆನಾರ್ಡ್,
ಪ್ರಸಿಡೆಂಟ್.